# *4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು*

ಎಸ್‌ಸಿ. 110/2017

| | | | |
|---|---|---|---|
| **ಸಾಕ್ಷಿದಾರರ ಹೆಸರು** | ಃ ಶ್ರೀ ಸಂತೋಷ್ | | ಪ್ರಮಾಣ ಮಾಡಿಸಿದ ದಿನಾಂಕಃ |
| **ತಂದೆ/ಗಂಡನ ಹೆಸರು** | ಃ ಶ್ರೀ ಬಂದಿಗೌಡ | | **10.09.2024** |
| **ವಯಸ್ಸು** | ಃ **36** ವರ್ಷ | | |
| **ವೃತ್ತಿ** | ಃ ಪೇಪರ್ ಏಜೆನ್ಸಿ | **ಪ್ರಾ.ಸಾ.** | ಃ **29** |
| **ವಾಸಸ್ಥಳ** | ಃ ದಟ್ಟಗಳ್ಳಿ, ಮೈಸೂರು | **ಚಾ.ಸಾ.** | ಃ **46** |

**ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ**

. ನಾನು ಈ ಮೊದಲು ಉಪಯೋಗ ಮಾಡಿದ ಕಾರುಗಳನ್ನು ಮಾರಾಟ ಮಾಡುವ ಏಜೆಂಟ್ ಕೆಲಸ ಮಾಡುತ್ತಿದ್ದೆ. ನಾನು ಕೋರ್ಟ್ ಮುಂದೆ ಇರುವ ಆರೋಪಿತರ ಪೆೃ ಯಾವ ಆರೋಪಿತರಿಗೂ ಕಾರನ್ನು ಕೊಡಿಸಿಲ್ಲ. ಈ ಪ್ರಕರಣದ 1 ನೇ ಆರೋಪಿತರನ್ನು ಈ ಮೊದಲು ಎಲ್ಲಿಯೂ ನೋಡಿಲ್ಲ. ಚಾ.ಸಾ-45 ಲಿಂಗೇಶ್ ನನಗೆ ದೂರದ ಸಂಬಂಧಿಯಾಗಬೇಕು. ಲಿಂಗೇಶ್ ಇವರ ಬಳಿ ಒಂದು ಸ್ಯಾಂಟ್ರೋ ಕಾರ್ ಇತ್ತು ಅದರ ನಂಬರ್ ಮತ್ತು ಮಾಡೆಲ್ ನಂಬರ್ ಈಗ ನೆನಪಿಲ್ಲ. ಆ ಲಿಂಗೇಶ್ ಇವರ ಕಾರನ್ನು ಮಳವಳ್ಳಿಯ ಯಾವುದೋ ಒಬ್ಬ ವ್ಯಕ್ತಿಗೆ ಮಾರಾಟ ಮಾಡಿಸಿದ್ದೆ. ಆ ಲಿಂಗೇಶ್ ಇವರ ಕಾರನ್ನು ಮಾರಾಟ ಮಾಡಿಸಿದ ಬಳಿಕ ಪುನಃ ಯಾವತ್ತು ನೋಡಿಲ್ಲ. ಈ ಪ್ರಕರಣದ ತನಿಖೆ ಕಾಲಕ್ಕೆ ನನ್ನು ಪೋಲೀಸ್ ಠಾಣೆಗೆ ಕರೆಸಿದ್ದರು ಆದರೆ ಆ ಕಾಲಕ್ಕೆ ನನಗೆ ಕಾರನ್ನು ತೋರಿಸಿಲ್ಲ. ಕೋರ್ಟ್ ಆವರಣದಲ್ಲಿ

ನಿಲ್ಲಿಸಿರುವ ಈಗ ನಾನು ನೊಡುತ್ತಿರುವ ಎಂ.ಒ-27 ಎಂದು ಗುರುತಿಸಿರುವ ನಿ.ಪಿ-65 ಪೊಟೋದಲ್ಲಿ ತೋರಿಸುತ್ತಿರುವ ಕಾರು ಯಾವುದು ಎಂದು ನನಗೆ ಗುರುತಿಸಲು ಆಗುವುದಿಲ್ಲ. ಪೋಲೀಸ್ ಠಾಣೆಯಲ್ಲಿ ಹೇಳಿಕೆ ಕೊಟ್ಟಿದ್ದೇನೆ ಆದರೆ ಅದನ್ನು ಪೋಲೀಸರು ಹೇಳಿದಂತೆ ಹೇಳಿದ್ದೇನೆ. ಈಗ ನಾನು ನೋಡುತ್ತಿರುವ ಹೇಳಿಕೆಯಲ್ಲಿನ ಸಹಿ ನನ್ನದೇ ಇದ್ದು ಅದನ್ನು ನ್ಯಾಯಾಧೀಶರ ಮುಂದೆ ಕೊಟ್ಟಿದ್ದೇನೆ. ಸದರಿ ಹೇಳಿಕೆಯನ್ನು ನಿ.ಪಿ-112 ಮತ್ತು ಸಹಿಯನ್ನು ನಿ.ಪಿ-112(ಎ) ಎಂದು ಗುರುತಿಸಿದೆ. ನ್ಯಾಯಾಧೀಶರ ಮುಂದೆ ಏನು ಹೇಳಿಕೆ ಕೊಟ್ಟಿದ್ದೇನೆ ಎಂದು ಈಗ ನೆನಪಿಲ್ಲ.

*ಈ ಹಂತದಲ್ಲಿ, ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.*

*ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ-*

2. 2016 ನವೆಂಬರ್ ಮೊದಲ ವಾರದಲ್ಲಿ ಈ ಪ್ರಕರಣದ 1ನೇ ಆರೋಪಿತ ಹೇಮಂತ್ ನನ್ನ ಬಳಿ ಬಂದು ಕಡಿಮೆ ಬೆಲೆಗೆ ಕಾರನ್ನು ಕೊಡಿಸುವಂತೆ ಕೇಳಿದಾಗ ನಾನು ನನ್ನ ಸಂಬಂಧಿಯಾಗಿ ಲಿಂಗೇಶ್ ಇವರ ಬಳಿ ಇದ್ದ ಸ್ಯಾಂಟ್ರೋ ಕಾರನ್ನು 1ನೇ ಆರೋಪಿತನಿಗೆ ಮಾರಾಟ ಮಾಡಿಸಿದ್ದೆ ಎಂದರೆ ಮಾರಾಟ ಮಾಡಿಸಿದ್ದೆ ಆದರೆ ಖರೀದಿ ಮಾಡಿದ ವ್ಯಕ್ತಿ ಯಾರೆಂದು ನೆನಪಿಲ್ಲ. ಕೋರ್ಟ್ ಮುಂದೆ ಇರುವ 1ನೇ ಆರೋಪಿತ ಹೇಮಂತ್ ಕಾರನ್ನು ಖರೀದಿ ಮಾಡಿಲ್ಲ. ದಿಃ30.12.2016 ರಂದು ವಿ.ವಿ.ಪುರಂ ಪೋಲೀಸ್ ಠಾಣೆ ಆವರಣದಲ್ಲಿ ನಿಲ್ಲಿಸಿದ್ದ ನಾನು ಮಾರಾಟ ಮಾಡಿಸಿದ್ದ ಕಾರನ್ನು ನನಗೆ ತೋರಿಸಿದ್ದರು ಮತ್ತು ಅದನ್ನು ನೋಡಿ ನಾನು ಗುರುತಿಸಿದ್ದೆ ಎಂದರೆ ಸರಿಯಲ್ಲ. ಈ ಕುರಿತು ನಾನು ಸುಮಾರು ------- ಗುರುತಿಸುತ್ತೇನೆ ಎಂದು

ಹೇಳಿಕೆ ಕೊಟ್ಟಿದ್ದೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿ.ಪಿ–*113* ಎಂದು ಗುರುತಿಸಿದೆ. ಎಂ.ಒ–*27* ಆ ದಿನ ನನಗೆ ತೋರಿಸಿದ ಕಾರು ಇರುತ್ತದೆ ಎಂದರೆ ಸರಿಯಲ್ಲ. ನಿ.ಪಿ–*112* ರಂತೆ ಹೇಳಿಕೆ ಕೊಡುವ ಕಾಲಕ್ಕೆ ಲಿಂಗೇಶ್ ಇವರ ಕಾರನ್ನು *1* ನೇ ಆರೋಪಿತನಿಗೆ ಕೊಡಿಸಿದ್ದ ಬಗ್ಗೆ ನಾನೇ ಸ್ವತಃ ಹೇಳಿಕೆ ಕೊಟ್ಟಿದ್ದೆ ಎಂದರೆ ಸರಿಯಲ್ಲ. *1* ನೇ ಆರೋಪಿ ಹೇಮಂತ್ ನನ್ನು ನೋಡಿದ್ದರು ಸಹ ಈಗ ನೋಡಿಲ್ಲ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈಗ ಆರೋಪಿತರೊಂದಿಗೆ ಶಾಮೀಲಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು ಃ 1 ಮತ್ತು 2 ನೇ ಆರೋಪಿ ಪರ ವಕೀಲರಾದ ಶ್ರೀ ವಿ.ಬಿ.ಎನ್ ರವರಿಂದಃ-

*3.* ಪೋಲೀಸರು ಹೇಳಿಕೊಟ್ಟಂತೆ ನ್ಯಾಯಾಧೀಶರ ಮುಂದೆ ಹೇಳಿಕೆ ಕೊಟ್ಟಿದ್ದೇನೆ ಎಂದರೆ ನಿಜ. ನನ್ನನ್ನು ಕೇಸಿಗೆ ಸೇರಿಸುವುದಾಗಿ ಹೆದರಿಸಿದ್ದರಿಂದ ಆ ರೀತಿ ಹೇಳಿಕೆ ಕೊಟ್ಟಿದ್ದೆ ಎಂದರೆ ನಿಜ.

ಪಾಟೀ ಸವಾಲುಃ ಉಳಿದ ಆರೋಪಿತರ ಪರ ವಕೀಲರವರಿಂದಃ ಇಲ್ಲ

ಮರು ವಿಚಾರಣೆಃ- ಇಲ್ಲ.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

*ಓ ಹೇ ಕೇ ಸ ಇ ಎ ಒ.,*

*4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,*
ಮೈಸೂರು